ದಿನಾಂಕಃ 27-03-2023

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ-1, 3 ರಿಂದ 9 ನೇ ಪ್ರತಿವಾದಿಗಳ ಪರ Sri SHB ವಕೀಲರಿಂದಃ**

ಸಾಮಾನ್ಯವಾಗಿ ಯಾವುದೇ ಕರಾರು ಪತ್ರದಲ್ಲಿ ಉಭಯ ಪಕ್ಷಗಾರರ ಸಹಿಗಳು ಇರಬೇಕು ಎಂದರೆ ಸರಿ . ಸಾಕ್ಷಿಗೆ ನಿ.ಪಿ.1 ರ ಪತ್ರವನ್ನು ತೋರಿಸಲಾಗಿ, ಅದರಲ್ಲಿ ಎಲ್ಲೂ ನನ್ನ ಸಹಿ ಕಂಡು ಬರುತ್ತಿರುವುದಿಲ್ಲ ಎಂದರೆ ಸರಿ . ನಾನು ನನ್ನ ಸಹಿಯನ್ನು ಆಂಗ್ಲ ಭಾಷೆಯಲ್ಲಿ ಮಾಡುತ್ತೇನೆ ಎಂದರೆ ಸರಿ. ನಾನು ಒಂದುವೇಳೆ ನಿ.ಪಿ.1 ಕ್ಕೆ ಸಹಿ ಮಾಡಿದಲ್ಲಿ ನಾನು ಪ್ರತಿವಾದಿಯರಿಗೆ ಮೋಸ ಮಾಡಿರುವ ವಿಚಾರ ಕಂಡು ಬರುತ್ತದೆ ಎಂಬ ಕಾರಣದಿಂದ ಉದ್ದೇಶಪೂರ್ವಕವಾಗಿ ನಾನು ನಿ.ಪಿ.1 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಮತ್ತು ಪ್ರತಿವಾದಿಯರಲ್ಲಿ ನಾನೇ ಬುದ್ಧಿವಂತನಾಗಿರುತ್ತೇನೆ ಎಂದರೆ ಸರಿಯಲ್ಲ, ಪ್ರತಿವಾದಿಯರೂ ಬುದ್ಧಿವಂತರಾಗಿರುತ್ತಾರೆ. ಪ್ರತಿವಾದಿಯರು ಅನಕ್ಷರಸ್ಥರು ಹಾಗೂ ಮುಗ್ಧರು ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರು ಖಾಸಾ ನೆಂಟರಾಗಿರುವ ಕಾರಣ, ಅವರಿಗೆ ನನ್ನ ಮೇಲೆ ಅಪಾರವಾದ ನಂಬಿಕೆ ಇತ್ತು ಎಂದರೆ ಸರಿಯಲ್ಲ. ನಾನು ಅವರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು 1, 3 ಮತ್ತು 4 ನೇ ಪ್ರತಿವಾದಿಯರ ಸಹಿಗಳನ್ನು ಒಂದು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಏಕಪಕ್ಷೀಯ ಆದೇಶವನ್ನು ಪಡೆದು ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿದ ನಂತರ ಪ್ರತಿವಾದಿಯರಿಗೆ ನಾನು ದಾವೆಯನ್ನು ಸಲ್ಲಿಸಿ ಏಕಪಕ್ಷೀಯ ಆದೇಶ ಪಡೆದುಕೊಂಡಿರುವುದು ತಿಳಿದಿರುತ್ತದೆ ಎಂದರೆ ಸರಿಯಲ್ಲ.

ನಿ.ಪಿ.1 ರ ಛಾಪಾ ಕಾಗದವನ್ನು ಪ್ರತಿವಾದಿಯರೇ ತಂದಿರುತ್ತಾರೆ. ನಿ.ಪಿ.1 ರ ಛಾಪಾ ಕಾಗದದಲ್ಲಿ ನಾನೇ ಛಾಪಾ ಕಾಗದವನ್ನು ತಂದಿರುತ್ತೇನೆಂದು ಒಕ್ಕಣೆ ಇರುತ್ತದೆ ಎಂದರೆ ಸರಿ. ನಿ.ಪಿ.1 ರ ಪತ್ರದಲ್ಲಿ

ಬರೆದಿರುವ ಒಕ್ಕಣೆಗಳು ಸತ್ಯವಾಗಿರುತ್ತದೆ ಎಂದರೆ ಸರಿ. ನಿ.ಪಿ.1 ರ ಪತ್ರದಲ್ಲಿ "**ಪರಮೇಶಪ್ಪ ಬಿನ್ ಪಾಪಣ್ಣ, ನೇರಲಗುಡ್ಡ , ಬುಕ್ಕಾಪಟ್ಟಣ ಹೋಬಳಿ, ಶಿರಾ ತಾಲ್ಲೂಕು ಆದ ನನಗೆ ಕರಾರು ಪತ್ರ ಬರೆದುಕೊಡಲು ರೂ.100–00 ರೂಪಾಯಿಗಳ ಛಾಪಾ ಕಾಗದ ಪಡೆಯುವ ಉದ್ಧೇಶಕ್ಕಾಗಿ**" ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸದರಿ ವಿಚಾರ ನನಗೆ ಗೊತ್ತಿರುವುದಿಲ್ಲ , ಛಾಪಾ ಕಾಗದವನ್ನು ಅವರೇ ತಂದು ಬರೆದುಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ನಿ.ಪಿ.1 ರಲ್ಲಿ ಶಾರದಮ್ಮರವರ ಹೆಬ್ಬೆಟ್ಟಿನ ಗುರುತು 2 ನೇ ಪುಟದಲ್ಲಿ ಮಾತ್ರ ಇರುತ್ತದೆ ಎಂದರೆ ಸರಿ. ಮೊದಲ ಪುಟದಲ್ಲಿ ಶಾರದಮ್ಮರವರ ಹೆಬ್ಬೆಟ್ಟಿನ ಗುರುತು ಇರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡ ನಂತರ ಸದರಿ ಹೆಬ್ಬೆಟ್ಟಿನ ಗುರುತು ಇಂತಹ ವ್ಯಕ್ತಿಯದ್ದೇ ಆಗಿರುತ್ತದೆಂದು ಗುರುತಿಸಿ ಸಹಿ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಸದರಿ ಪತ್ರವನ್ನು ಅವರೇ ಸಹಿ ಮಾಡಿಸಿ ನನಗೆ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ನಿ.ಪಿ.1 ರಲ್ಲಿ ನಮೂದಿರುವ LTM of Sharadamma ಎನ್ನುವ ಬರವಣಿಗೆ ಯಾರದ್ದಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ , ಅದನ್ನು ಸ್ಟಾಂಪ್ ವೆಂಡರ್ ಬಳಿ ಬರೆಸಿ ನನಗೆ ತಂದುಕೊಟ್ಟಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ. ನಿ.ಪಿ.1 ರ ದಾಖಲೆಯನ್ನು ನಾನು ಸೃಷ್ಟಿ ಮಾಡಿಕೊಂಡಿರುವ ಕಾರಣ, ಶಾರದಮ್ಮರವರ ಹೆಬ್ಬೆಟ್ಟಿನ ಗುರುತನ್ನು ಕೇವಲ 2 ನೇ ಪುಟದಲ್ಲಿ ಪಡೆದುಕೊಂಡಿದ್ದು, ಮೊದಲನೇ ಪುಟದಲ್ಲಿ ಅವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು ನನಗೆ ಸಂಬಂಧಿಕರಾಗಿದ್ದು , ಅವರ ಮೇಲೆ ನನಗೆ ನಂಬಿಕೆ ಇದ್ದು , ಅವರು ಕ್ರಯಪತ್ರ ಬರೆದುಕೊಡುತ್ತಾರೆಂಬ ನಂಬಿಕೆ ಇದ್ದ ಕಾರಣ, ನಿ.ಪಿ.1 ನ್ನು ನಾನು ನೋಂದಣಿ ಮಾಡಿಸಿಕೊಂಡಿರುವುದಿಲ್ಲ. ಸಾಮಾನ್ಯವಾಗಿ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡುವ ಸಮಯದಲ್ಲಿ ದಾಖಲೆಗಳ ಬಗ್ಗೆ ಉಭಯ ಪಕ್ಷಗಾರರಿಗೆ ಓದಿ ಹೇಳಿ ನಂತರ ಪಕ್ಷಗಾರರ

ಒಪ್ಪಿಗೆಯ ಮೇರೆಗೆ ಅದನ್ನು ನೋಂದಣಿ ಮಾಡುತ್ತಾರೆ ಎಂದರೆ ಸರಿ. ನಿ.ಪಿ.1 ರ ಪತ್ರವನ್ನು ನೋಂದಣಿ ಮಾಡಿಸಿದಲ್ಲಿ, ನೋಂದಣಾಧಿಕಾರಿಗಳು ಸದರಿ ಪತ್ರದ ವಿಚಾರವನ್ನು ಪ್ರತಿವಾದಿಗಳಿಗೆ ಓದಿ ಹೇಳಿದಾಗ ಅವರು ಸರಿ ಇರುವುದಿಲ್ಲವೆಂದು ಹೇಳುತ್ತಾರೆಂದು ತಿಳಿದ ಕಾರಣ, ನಾನು ನಿ.ಪಿ.1 ರ ಪತ್ರವನ್ನು ನಾನು ನೋಂದಣಿ ಮಾಡಿಸಲು ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಪತ್ರವನ್ನು ಪ್ರತಿವಾದಿಯರೇ ಬರೆಸಿ ನನಗೆ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ.

ಪಿಡಬ್ಲ್ಯು-2 ಸಾಕ್ಷಿದಾರರು ಹಾಗೂ ಎನ್.ವಿ. ಗೋವಿಂದಪ್ಪರವರು ನೇರಲಗುಡ್ಡ ಗ್ರಾಮದವರು. ಪತ್ರ ಬರಹಗಾರರಾದ ರಾಮಮೂರ್ತಿ , ಎಲ್.ನಾಗರಾಜು ಹಾಗೂ ಎನ್.ವಿ. ಗೋವಿಂದಪ್ಪರವರು ನನ್ನೊಂದಿಗೆ ಬಹಳ ವಿಶ್ವಾಸದಿಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಇವರ ಪೈ ಎಲ್.ನಾಗರಾಜುರವರು ನನ್ನೊಂದಿಗೆ ವಿಶ್ವಾಸದಿಂದಿದ್ದು , ಪರಿಚಯಸ್ಥರಾಗಿರುತ್ತಾರೆ. ಎಲ್. ನಾಗರಾಜು ಮತ್ತು ಎನ್.ವಿ. ಗೋವಿಂದಪ್ಪ ಹಾಗೂ ಪ್ರತಿವಾದಿಯರ ನಡುವೆ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ. ಅವರೆಲ್ಲಾ ಒಂದೇ ಗ್ರಾಮದವರಾಗಿದ್ದು ಅವರೆಲ್ಲಾ ಪರಸ್ಪರ ಚನ್ನಾಗಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ. ಅವರ ನಡುವೆ ಮನಸ್ತಾಪ ಇರುವ ಕಾರಣ ನಾನು ಹಾಗೂ ಸಾಕ್ಷಿದಾರರು ಸೇರಿ ರಾಮಮೂರ್ತಿಯವರೊಂದಿಗೆ ಶಾಮೀಲಾಗಿ ನಿ.ಪಿ.1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2010 ರಲ್ಲಿ 1,62,000-00 ಮತ್ತು 1,38,000-00 ರೂ.ಗಳು ನನ್ನ ಬಳಿ ಇದ್ದುದನ್ನು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆದರೆ ನನ್ನ ವ್ಯವಹಾರದಿಂದ ಬಂದ ಹಣವನ್ನು ಕೂಡಿಟ್ಟು ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ. ನಾನು ಹಣವನ್ನು ಕೂಡಿಟ್ಟು ಪ್ರತಿವಾದಿಯರಿಗೆ ಕೊಟ್ಟು ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವ್ಯವಹಾರವನ್ನು ಮಾಡದೇ ಇದ್ದ ಕಾರಣ, ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ

ಪ್ರತಿವಾದಿಯರಿಗೆ ಸುಮಾರು 18 ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಇನ್ನೂ ಹೆಚ್ಚಿಗೆ ಇದ್ದು , ಅವುಗಳನ್ನು ಅವರು ಮಾರಾಟ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಪ್ರತಿವಾದಿಯರು ತಮ್ಮ ಜಮೀನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲದ ಕಾರಣ, ಸಂಬಂಧಪಟ್ಟ ದಾಖಲೆಗಳನ್ನು ನಾನು ಹಾಜರುಪಡಿಸಲು ಸಾಧ್ಯವಿರುವುದಿಲ್ಲ. ಪ್ರತಿವಾದಿಯರು ಆರ್ಥಿಕವಾಗಿ ಸ್ಥಿತಿವಂತರಾಗಿದ್ದು , ಅವರಿಗೆ ಜಮೀನನ್ನು ಮಾರಾಟ ಮಾಡುವ ಯಾವುದೇ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಮುಗ್ಧರಾಗಿರುವ ಪ್ರತಿವಾದಿಯರಿಗೆ ನಾನು ಮೋಸ ಮಾಡುವ ಉದ್ದೇಶದಿಂದ ಹಾಗೂ ದಾವಾ ಸ್ವತ್ತನು ಕಬಳಿಸುವ ಉದ್ದೇಶದಿಂದ ನಿ.ಪಿ.1 ರ ದಾಖಲೆಯನ್ನು ಸೃಷ್ಟಿ ಮಾಡಿ ಈ ಸುಳ್ಳು ದಾವೆಯನ್ನು ಅವರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ಪತ್ರದಲ್ಲಿ ಅಪ್ರಾಪ್ತ ವಯಸ್ಕರಾಗಿರುವ ವ್ಯಕ್ತಿಗಳು ಹಾಗೂ ಪ್ರಾಪ್ತ ವಯಸ್ಕರಾಗಿರುವ ವ್ಯಕ್ತಿಗಳ ಬಗ್ಗೆ ಸರಿಯಾಗಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಪತ್ರವನ್ನು ಪ್ರತಿವಾದಿಯರೇ ಬರೆಸಿಕೊಂಡು ತಂದಿರುತ್ತಾರೆಂದು ನುಡಿದಿರುತ್ತಾರೆ . ಪ್ರತಿವಾದಿಯರು ನನಗೆ ಪತ್ರವನ್ನು ಬರೆಸಿಕೊಂಡು ಬಂದು ನನಗೆ ಕೊಟ್ಟಾಗ ಅದನ್ನು ನಾನು ಓದಿಲ್ಲದೇ ಇರುವ ಕಾರಣ, ಅದರಲ್ಲಿ 19 ನೇ ವರ್ಷದವರನ್ನು ಅಪ್ರಾಪ್ತ ವಯಸ್ಕರಾಗಿರುತ್ತಾರೆಂದು ಬರೆಸಿರುವುದನ್ನು ನಾನು ನೋಡಿರುವುದಿಲ್ಲ. ನಾನು ನನ್ನ ವಕೀಲರ ಬಳಿ ನೋಟೀಸನ್ನು ಜಾರಿ ಮಾಡಲು ಪತ್ರವನ್ನು ತೆಗೆದುಕೊಂಡು ಹೋದ ಸಮಯದಲ್ಲಿ ನಮ್ಮ ವಕೀಲರು 19 ವರ್ಷದವರನ್ನು ಅಪ್ರಾಪ್ತ ವಯಸ್ಕರೆಂದು ತಪ್ಪಾಗಿ ನಮೂದು ಮಾಡಿರುತ್ತಾರೆಂದು ಹೇಳಿರುವುದಿಲ್ಲ. ಸದರಿ ಪತ್ರವನ್ನು ಪರಿಶೀಲಿಸಿ, ನನ್ನ ವಕೀಲರು ಯಾವುದೇ ವಿಚಾರವನ್ನು ನನಗೆ ಹೇಳಿರುವುದಿಲ್ಲ.

ನಿ.ಪಿ.1 ರ ಪತ್ರವನ್ನು ಪ್ರತಿವಾದಿಯರು ಬರೆಸಿಕೊಂಡು ಬಂದಿರುತ್ತಾರೆಂದು ಹೇಳಲಾದ ಸಮಯದಲ್ಲಿ ನಾನು ಹಾಜರಿರಲಿಲ್ಲ.

ನಾನು ನಿ.ಪಿ.1 ರ ಪತ್ರವನ್ನು ಸೃಷ್ಟಿಸಿಕೊಂಡಿರುವ ಕಾರಣ, ಈ ದಿನ ಸುಳ್ಳು ಕಥೆಯನ್ನಾಧರಿಸಿ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಲೆ ಬಾಳುವ ಪ್ರತಿವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ–

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.